<u>**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**</u>

**ಸಿ.ಸಿ. ಸಂಖ್ಯೆಃ 390/2021**

**ಸಾಕ್ಷಿಯನ್ನು ದಿಃ 25.06.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ನಾರಾಯಣ ಸ್ವಾಮಿ | ಸಿಡಬ್ಲ್ಯೂಃ 8 ಪಿಡಬ್ಲ್ಯೂಃ 5 |
| ತಂದೆ ಹೆಸರು | ಎನ್ ಪುಟ್ಟ ಮಾದಯ್ಯ | |
| ವಯಸ್ಸು | 64 ವರ್ಷ | |
| ಕೆಲಸ | ನಿವೃತ್ತ ಎ ಎಸ್ ಐ | |
| ವಾಸಸ್ಥಳ | ಹೆಚ್ ಡಿ ಕೋಟೆ ಪಟ್ಟಣ | |

<u>**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**</u>

ನಾನು ದಿಃ 13.11.2020 ರಿಂದ ದಿಃ 30.10.2021 ರ ವರೆಗೆ ನಾನು ಹುಣಸೂರು ಪಟ್ಟಣ ಪಿ ಎಸ್ ನಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿಃ **22.01.2021** ರಂದು ಠಾಣಾ ಕರ್ತವ್ಯದಲ್ಲಿ ಇದ್ದಾಗ ಮೊಕದ್ದಮೆ ಸಂಖ್ಯೆ 14/2021 ರ ಈ ಪ್ರಕರಣದ ಆರೋಪಿ ಯನ್ನು ಚಾಸಾ 6 ರವರು ದಸ್ತಗಿರಿ ಮಾಡಿ ನನ್ನ ಮುಂದೆ ಹಾಜರು ಪಡಿಸಿದ್ದು , ಸದರಿ ವಿಷಯವನ್ನು ನಾನು ಮೇಲಾಧಿಕಾರಿಯವರ ಗಮನಕ್ಕೆ ತಂದು , ಆತನ ಮೇಲೆ ದಸ್ತಗಿರಿ ಕ್ರಮ ಜರುಗಿಸಿ ರಿಮ್ಯಾಂಡ್ ಅರ್ಜಿಯೊಂದಿಗೆ ಚಾಸಾ 6 ರವರ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ . ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ . ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಂ ಆರ್ ಹೆಚ್ ವಕೀಲರಿಂದಃ**

ಆರೋಪಿಯನ್ನು ನನ್ನ ಮುಂದೆ ಹಾಜರು ಪಡಿಸಿದಾಗ ಆತನ ಮೇಲೆ ಇದ್ದ ದೂರು ನನ್ನ ಬಳಿ ಆ ಸಮಯದಲ್ಲಿ ಇರಲಿಲ್ಲ. ಆರೋಪಿಯ ಮೇಲೆ ಸುಳ್ಳು ಆರೋಪ ಸಲ್ಲಿಸಿ ಆತನನ್ನು ರಿಮ್ಯಾಂಡ್ ಮಾಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.